# ಕುಂಚ ಪ್ರಪಂಚ



**ಅದಿತಿ ನಾವಡ ಪಿ.**
7ನೇ ತರಗತಿ
ಶ್ರೀಸಿದ್ದಿವಿನಾಯಕ ರೆಸಿಡೆನ್ಸಿ
ಶಾಲೆ ಹಟ್ಟಿಯಂಗಡಿ
ಕುಂದಾಪುರ





**ಅನಿಶಿ ಗೌತಮ್**
1ನೇ ತರಗತಿ
ನ್ಯಾಷನಲ್ ಪಬ್ಲಿಕ್ ಶಾಲೆ
ರಾಜಾಜಿನಗರ
ಬೆಂಗಳೂರು.





ವಿಜಯಕುಮಾರಿ

## ಅಪ್ಪಿಯ ಆಸೆ

■ ಬೀರಣ್ಣ ನಾಯಕ ಮೊಗಟಾ

ದಿನ ದಿನ ಕಳೆಯುವ
ಅಂದದಿ ಬೆಳೆಯುವ
ಅಪ್ಪಿಯ ಆಸೆಯು ಹೀಗಂತೆ
ಚಂದಿರನಲ್ಲಿಗೆ
ಆಟಕೆ ಕರೆದರೆ ಹೇಗಂತೆ!

ಚುಕ್ಕೆಯ ಕಂಡು
ಮಿನುಗುವ ದಂಡು
ಪೋಣಿಸಿ ದಂಡೆಯ ಮಾಡುವೆನು
ಚಂದಿರ ನೋಡು
ಮೊಲಕಿದೆ ಕೋಡು
ಗೆಳೆಯರ ಕರೆದು ಆಡುವೆನು!

ಗುಡ್ಡವ ಏರುತ
ಕೈಯನು ಬಳಸುತ
ಹಕ್ಕಿಯ ಜೊತೆಯಲಿ ಹಾರೋಣ
ಸಂದರ ಕಡಲು
ಸಾಗರದೊಡಲು
ಮೀನಿನ ಜೊತೆಯಲಿ ಈಜೋಣ!

ಬೆಟ್ಟವ ಸುತ್ತುತ
ಮರಗಳ ಏರುತ
ಮಾಗಿದ ಹಣ್ಣನು ಸವಿಯೋಣ
ಸ್ನೇಹದಿ ನಾವು
ಪ್ರೀತಿಯ ಹೂವು
ಎಲ್ಲರು ಸುಖದಿ ಬಾಳೋಣ!



**ಸಮರ್ಥ್ ಕೆಂಬೈನ್ ಡಿ.ಜೆ**
6ನೇ ತರಗತಿ.
ಚಿನ್ಮಯ ವಿದ್ಯಾಮಂದಿರ
ಶಾಲೆ
ಕೋರಮಂಗಲ.
ಬೆಂಗಳೂರು



**ನೀವೂ ಚಿತ್ರ ಬರೆಯಿರಿ**

ಸುಧಾ ವಾರ ಪತ್ರಿಕೆಯ ಎಳೆಯರ ಅಂಗಳ ವಿಭಾಗಕ್ಕೆ ಕಥೆ- ಕವಿತೆ ಜೊತೆ ಮಕ್ಕಳೇ ಬರೆದ ವರ್ಣಚಿತ್ರ- ರೇಖಾ ಚಿತ್ರಗಳನ್ನು ಕಳುಹಿಸಬಹುದು. ಇ ಮೇಲ್: editorsu@sudha.co.in